## ಪೊಲೀಸ್ ಅಧೀಕ್ಷಕರವರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ

**ದಿನಾಂಕ:02/07/2022**

## ಪತ್ರಿಕಾ ಪ್ರಕಟಣೆ

### ಹೊಸಕೋಟೆ ಉಪವಿಭಾಗ

### ಆವಲಹಳ್ಳಿ ಪೊಲೀಸ್ ಠಾಣೆ

# ಅಪಹರಣ ಯತ್ನ ಮತ್ತು ಹಣಕ್ಕೆ ಬೇಡಿಕೆ ಇಟ್ಟಿದ್ದ ಆರೋಪಿಗಳ ಬಂಧನ

**ಆವಲಹಳ್ಳಿ ಪೊಲೀಸ್ ಠಾಣೆ, ಹೊಸಕೋಟೆ ಉಪ ವಿಭಾಗ, ಬೆಂಗಳೂರು ಜಿಲ್ಲೆ.**

ದಿನಾಂಕ:30/06/2022 ರಂದು ಬೆಂಗಳೂರು ಜಿಲ್ಲೆ ಆವಲಹಳ್ಳಿ ಪೊಲೀಸ್ ಠಾಣೆ ಸರಹದ್ದು ಕಿತ್ತಗನೂರು ಗ್ರಾಮದ ಹ್ಯಾಪಿಗಾರ್ಡನ್ ಬಿಸ್ಲೇರಿ ಪ್ಯಾಕ್ಟರಿ ಸಮೀಪ ಮನೋಜ್ ಕುಮಾರ್ ಬಿನ್ ಲೇಟ್ ಮುಕುಂದ ರವರ ಮಗ 6 ವರ್ಷದ ಸಾಯಿಅಕ್ಷಿತ್ ಎಂಬುವರನ್ನು ಮದ್ಯಾಹ್ನ 1-00 ಗಂಟೆ ಸಮಯದಲ್ಲಿ ಸ್ಕೂಲ್ ಮುಗಿಸಿಕೊಂಡು ಮನೆಗೆ ಸ್ಕೂಲ್ ವ್ಯಾನಿನಲ್ಲಿ ಬರುತ್ತಿರುವಾಗ ಯಾರೋ ಒಬ್ಬ ಅಪರಿಚಿತ ಗಂಡಸು ಮತ್ತು ಅಪರಿಚಿತ ಹೆಂಗಸು ಸ್ಕೂಲ್ ವ್ಯಾನ್ ನ್ನು ಅಡ್ಡಹಾಕಿ ವ್ಯಾನ್ ಡ್ರೈವರ್ ಬಾಷ ರವರಿಗೆ ಹೊಡೆದು ಅಪಹರಣ ಮಾಡಲು ಪ್ರಯತ್ನಿಸಿ ನಂತರ 7829613623 ನಂಬರಿನಿಂದ ಫೋನ್ ಮಾಡಿ 5 ಲಕ್ಷ ಹಣವನ್ನು ಕೊಡದಿದ್ದರೆ ಮತ್ತೆ ಕಿಡ್ನಾಪ್ ಮಾಡುವುದಾಗಿ ಬೆದರಿಕೆ ಹಾಕಿದ್ದು ಈ ಬಗ್ಗೆ ಆವಲಹಳ್ಳಿ ಪೊಲೀಸ್ ಠಾಣೆಯ ಮೊ.ನಂ 254/2022 ಕಲಂ:364(ಎ). 323. 506. 511 ಜೊತೆಗೆ 34 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ. ಈ ಪ್ರಕರಣದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾನ್ಯ ಪೊಲೀಸ್ ಅಧೀಕ್ಷಕರಾದ ಶ್ರೀ ಡಾ:ಕೆ.ವಂಶಿಕೃಷ್ಣ. ಐಪಿಎಸ್.ಮಾನ್ಯ ಅಪರ ಪೊಲೀಸ್ ಅಧೀಕ್ಷಕರಾದ ಶ್ರೀ ಲಕ್ಷ್ಮಿಗಣೇಶ್.ಕೆ. ಕೆ.ಎಸ್.ಪಿ.ಎಸ್. ರವರ ಮಾರ್ಗದರ್ಶನದಲ್ಲಿ ಹೊಸಕೋಟೆ ಉಪವಿಭಾಗದ ಪೊಲೀಸ್ ಉಪಾಧೀಕ್ಷಕರಾದ ಶ್ರೀ ಉಮಾಶಂಕರ್.ಎಂ.ಹೆಚ್. ಕೆ.ಎಸ್.ಪಿ.ಎಸ್ ರವರ ನೇತೃತ್ವದಲ್ಲಿ ಆವಲಹಳ್ಳಿ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್ ಪೆಕ್ಟರ್ ಶ್ರೀ. ಡಿ.ಆರ್. ಪ್ರಕಾಶ್, ನೇತೃತ್ವದ ತಂಡ ಸಬ್-ಇನ್ಸ್ ಪೆಕ್ಟರ್ ಶ್ರೀ.ಶಿವಪ್ರಕಾಶ್. ಕೆ.ಸಿ. ಸಿಬ್ಬಂದಿಯವರಾದ ಹೆಚ್.ಸಿ 408. ಸೈಯ್ಯದ್ ಅಫ್ರೋಜ್. ಹೆಚ್.ಸಿ 466 ನರಸಿಂಹಪ್ಪ. ಹೆಚ್ ಸಿ 319 ಮುಕ್ತಿಯಾರ್, ಪಿಸಿ:904 ರಮೇಶ್. ಪಿಸಿ:1416 ಲೋಕೇಶ್. ಪಿಸಿ:798 ಧನಶೇಖರ್, ಪಿಸಿ 1695 ಸತೀಶ್, ಪಿಸಿ ಆನಂದ ಪಿಸಿ 1135 ರಾಮ್ ಕುಮಾರ್ ರವರೊಂದಿಗೆ ಕ್ಷಿಪ್ರಕಾರ್ಯಾಚರಣೆ ನಡೆಸಿ ಆರೋಪಿಗಳಾದ ಶಕ್ತಿವೇಲು ಮತ್ತು ಸುನೀತ ಎಂಬುವರನ್ನು ಪ್ರಕರಣ ದಾಖಲಾಗಿ 7 ಗಂಟೆಯಲ್ಲಿ ಪತ್ತೆ ಮಾಡಿ ದಿನಾಂಕ :01/07/2022 ರಂದು ಬೆಳಗಿನ ಜಾವ 4-00 ಗಂಟೆ ಸಮಯದಲ್ಲಿ ಕಾಟಂನಲ್ಲೂರು ಗೇಟ್ ಸಮೀಪ ಬಂದಿಸಿ ಅವರಿಂದ ಕೃತ್ಯಕ್ಕೆ ಉಪಯೋಗಿಸಿದ ಎರಡು ಮೊಬೈಲ್ ಮತ್ತು ಒಂದು ಡಿಯೋ ಬೈಕ್ ಅನ್ನು ವಶಕ್ಕೆ ಪಡೆದಿರುತ್ತೆ.

# -:ಆರೋಪಿಗಳ ವಿವರ:-

ಎ1. ಶಕ್ತಿವೇಲು ಬಿನ್ ಸುರೇಶ್ ಕುಮಾರ್. 20 ವರ್ಷ. ಪ.ಜಾತಿ. ಆಟೋ ಡ್ರೈವರ್. ಹಳೆ ಬಿ.ಬಿ.ಎಂ.ಪಿ ರಸ್ತೆ. ಬಾಷ ಪ್ರಾವೀಷನ್ ಸ್ಟೋರ್ ಹತ್ತಿರ. ಕೆಂಪಲಕ್ಕಣ್ಣ ಲೇಔಟ್,ಕೆ.ಆರ್. ಪುರಂ ಬೆಂಗಳೂರು-560049.

ಎ2: ಸುನೀತ ಕೋಂ ಜಾನ್ ಜೋಸಪ್. 30 ವರ್ಷ. ಕ್ರಿಶ್ಚಿಯನ್. ಲೈಫ್ ಸ್ಟೈಲ್ ನಲ್ಲಿ ಕೆಲಸ. ವಿಶಾಲ್ ಆಸ್ಪತ್ರೆ ಹತ್ತಿರ. ಮಾರಗೊಂಡನಹಳ್ಳಿ ರಸ್ತೆ. ಆನಂದಪುರ. ಬೆಂಗಳೂರು -560049.




ಆರೋಪಿಗಳನ್ನು ವಿಚಾರಣೆ ಮಾಡಿ ಸ್ವ-ಇಚ್ಛಾ ಹೇಳಿಕೆ ಪಡೆಯಲಾಗಿ. ಎ1 ಆರೋಪಿ ಶಕ್ತಿವೇಲು ಈ ಹಿಂದೆ ಪಿರ್ಯಾದಿ ಮನೋಜ್ ಕುಮಾರ್ ರವರ ಮೊದಲನೆ ಮಗ ಸಾಯಿ ವರುಣ್ ರವರನ್ನು ಬೈಕ್ ನಲ್ಲಿ ಒಂದು ವಾರ ಕೆ.ಆರ್. ಪುರಂನಲ್ಲಿರುವ ಐಟಿಐ ಸೆಂಟ್ರಲ್ ಸ್ಕೂಲಿಗೆ ಕರೆದುಕೊಂಡು ಹೋಗಿ ಮತ್ತೆ ವಾಪಸ್ ಕರೆದುಕೊಂಡು ಬಿಡುತ್ತಿದ್ದನು. ಆಗ ಮನೋಜ್ ಕುಮಾರ್ ರವರ ಹೆಂಡತಿ ಸೌಮ್ಯ ರವರ ಮೊಬೈಲ್ ನಂಬರ್ ನ್ನು ಎ1 ಆರೋಪಿ ಪಡೆದುಕೊಂಡಿದ್ದನು. ನಂತರ ಎ1 ಆರೋಪಿ ಶಕ್ತಿವೇಲು ಆಟೋ ಡ್ರೈವರ್ ಆಗಿದ್ದು ಆತನಿಗೆ ಧೂಮಪಾನ, ಮದ್ಯಪಾನ ಮತ್ತು ಹೆಂಗಸರ ಸಹವಾಸವಿರುತ್ತದೆ. ಆತ ದುಡಿಯುವ ದುಡ್ಡು ಆತನ ಮೋಜು ಮಸ್ತಿನ ಜೀವನಕ್ಕೆ ಸಾಕಾಗದೇ ಎ1 ಆರೋಪಿ ಶಕ್ತಿವೇಲು ತನ್ನ ಸ್ನೇಹಿತೆಯಾದ ಎ2 ಆರೋಪಿಯಾದ ಸುನೀತ ರವರ ಜೊತೆ ಪಿರ್ಯಾದಿ ಮನೋಜ್ ಕುಮಾರ್ ರವರ ಹತ್ತಿರ ಸಿಕ್ಕಾಪಟ್ಟೆ ದುಡ್ಡು ಇದೆ ಅವರ ಮಗ ಸಾಯಿ ಅಕ್ಷಿತ್ ಕೆ.ಆರ್. ಪುರಂನಲ್ಲಿರುವ ಐಟಿಐ ಸೆಂಟ್ರಲ್ ಸ್ಕೂಲಿಗೆ ಹೋಗುತ್ತಿರುತ್ತಾನೆ. ಆತನನ್ನು ಕಿಡ್ನಾಪ್ ಮಾಡಿ ಹಣವನ್ನು ವಸೂಲಿ ಮಾಡೋಣ ಎಂದು ಇಬ್ಬರು ಮಾತನಾಡಿಕೊಂಡು ದಿನಾಂಕ:27/06/2022 ರಂದು ಬೆಂಗಳೂರಿನಲ್ಲಿ ಮಾರುತಿ ಕಂಪನಿಯ ಬಿಳಿಯ ಬಣ್ಣದ ZEN ಕಾರನ್ನು ಬಾಡಿಗೆಗೆ ಪಡೆದು ದಿನಾಂಕ:30/06/2022 ರಂದು ಮದ್ಯಾಹ್ನ 01-00 ಗಂಟೆ ಸಮಯದಲ್ಲಿ ಕಿತ್ತಗನೂರು ಗ್ರಾಮದ ಹ್ಯಾಪಿ ಗಾರ್ಡನ್ ನಲ್ಲಿರುವ ಬಿಸ್ಲೇರಿ ಪ್ಯಾಕ್ಟರಿ ಹತ್ತಿರ ಸ್ಕೂಲ್ ವ್ಯಾನ್ ನ್ನು ನಿಲ್ಲಿಸಿ ಡ್ರೈವರ್‌ಗೆ ಕೈಗಳಿಂದ ಹೊಡೆದು ಸಾಯಿ ಅಕ್ಷಿತ್ ರವರನ್ನು ಅಪಹರಣ ಮಾಡಲು ಪ್ರಯತ್ನಿಸಿರುತ್ತಾರೆ ನಂತರ ಅದು ಸಾಧ್ಯವಾಗದೆ ವಾಪಸ್ ಹೋಗಿ ನಂತರ 7829613623 ನಂಬರಿನಿಂದ ಫೋನ್ ಮಾಡಿ 5 ಲಕ್ಷ ಹಣ ಕೊಡದೆ ಇದ್ದರೆ ಮತ್ತೆ ಕಿಡ್ನಾಪ್ ಮಾಡುವುದಾಗಿ ಬೆದರಿಕೆ ಹಾಕಿರುತ್ತೇವೆಂದು ಹೇಳಿಕೆ ನೀಡಿರುತ್ತಾರೆ. ಹಣವನ್ನು ಪಡೆಯಲು ಬಂದಾಗ ಪೊಲೀಸರು ಕ್ಷಿಪ್ರ ಕಾರ್ಯಾಚರಣೆ ನಡೆಸಿ ಮೇಲ್ಕಂಡ ಆರೋಪಿಗಳನ್ನು ಪತ್ತೆ ಮಾಡಿ ಬಂಧಿಸಿರುವುದಕ್ಕೆ ಮಾನ್ಯ ಪೊಲೀಸ್ ಅಧೀಕ್ಷಕರು ಅಧಿಕಾರಿ ಮತ್ತು ಸಿಬ್ಬಂದಿಯವರನ್ನು ಅಭಿನಂದಿಸಿರುತ್ತಾರೆ.

( ಶ್ರೀ ಡಾ: ಕೆ.ವಂಶಿಕೃಷ್ಣ. ಐ.ಪಿ.ಎಸ್.)